K-tech

भारतीय विज्ञान संस्थान

KSCST

ಸೈಸೆಕ್ ಸೈಬರ್ ಸೆಕ್ಯುರಿಟಿ ಕರ್ನಾಟಕ | ಕೆ-ಟೆಕ್ ಉನ್ನತಜ್ಞಾನ ಕೇಂದ್ರ

CySecK Cyber Security Karnataka | K-Tech CoE for Cyber Security

# ಸೈಬರ್ ವಾರ್ತಿಕ

## ಮಾರ್ಚ್ 2023 ಆವೃತ್ತಿ

# CYBER VARTIKA

## MARCH 2023 EDITION

## ಈ ಸಂಚಿಕೆಯಲ್ಲಿ

- ಮುನ್ನುಡಿ
- ಸಂಗ್ರಹಿಸಿದ ಸುದ್ದಿ
- ಸೈಸೆಕ್ ವರದಿ

## IN THIS ISSUE

- Foreword
- Curated News
- CySecK updates

ಸೈಬರ್ ವರ್ತಿಕಾನ್ನು ನಿಮ್ಮ ಸ್ನೇಹಿತರು ನಿಮಗೆ ಕಳಿಸಿದ್ದಲ್ಲಿ, ಪ್ರತಿ ತಿಂಗಳು ಅದನ್ನು ನೇರವಾಗಿ ಪಡೆಯಲು, ನಮ್ಮ ಸುದ್ಧಿಪತ್ರಿಕೆಯ ಮುಕ್ತ ಚಂದಾದಾರರಾಗಿ!
https://zcmp.in/BH6y

If Cyber Vartika was forwarded to you by a friend, get it directly every month by SUBSCRIBING HERE!
https://zcmp.in/BH6y

# ಮುನ್ನುಡಿ | FOREWORD

ಸೈಬರ್ ದಾಳಿ ನಡೆಸುವ ಕಾಣದ ಶತ್ರುವಿನ ವಿರುದ್ಧ ಹೋರಾಡುವ ತುರ್ತುಪರಿಸ್ಥಿತಿಯಲ್ಲಿ ನಾವಿದ್ದೇವೆ ಎಂದು ಎಲ್ಲರೂ ಮಾತಾಡುತ್ತಾರೆ. ಆದರೆ, ಸೈಬರ್ ಭದ್ರತೆ ಕ್ಷೇತ್ರದಲ್ಲಿ ನುರಿತ ಮಾನವಶಕ್ತಿಯ ಅತೀವ ಕೊರತೆಯ ಬಗ್ಗೆ ನಾವು ಎಷ್ಟೇ ದೊಡ್ಡದೊಡ್ಡ ಮಾತಾಡಿದರೂ, ನಿಸ್ಸಂಶಯವಾಗಿ, ಸೈಬರ್ ಸುರಕ್ಷಿತ ಅಭ್ಯಾಸಗಳಒಮ್ಮತದ ಕೊರತೆ ತೀವ್ರವಾಗಿದೆ. ಈ ಶಿಸ್ತಿನ ಪ್ರಧಾನ ಘಟಕ ಮತ್ತು ಸೂಕ್ತ ಸಂಯೋಜನೆ ಯಾವುದೆಂದುಉತ್ತರಿಸುವುದು ಸ್ವಲ್ಪ ಕಷ್ಟವೇ ಸರಿ. ಯಾಕೆಂದರೆ ಆಧುನಿಕ ಜೀವನದಲ್ಲಿ ನಾವು ಮಾಡುವ ಎಲ್ಲಾ ಚಟುವಟಿಕೆಗಳ ಜೊತೆಗೂ ಸೈಬರ್ ಭದ್ರತೆ ಎಂಬುದು ತಳುಕು ಹಾಕಿಕೊಂಡಿದೆ. ಅದು ವಾಣಿಜ್ಯ, ಆರ್ಥಿಕತೆ, ಆಡಳಿತ, ರಾಷ್ಟ್ರೀಯ ಭದ್ರತೆಯಂತಹ ಪ್ರಮುಖ ವಲಯಗಳೇ ಆಗಿರಬಹುದು ಹಾಗೂ ಕಂಪ್ಯೂಟರ್ ವಿಜ್ಞಾನ, ಎಲೆಕ್ಟ್ರಾನಿಕ್ಸ್, ವ್ಯಾಪಾರ ನಿರ್ವಹಣೆ, ಆಡಳಿತ, ನೀತಿಶಾಸ್ತ್ರ, ವ್ಯಾಪಾರ, ಮನೋವಿಜ್ಞಾನ, ವಿಶ್ವ ರಾಜಕೀಯ, ಕಾನೂನು, ಕ್ವಾಂಟಮ್ ಕಂಪ್ಯೂಟಿಂಗ್ ಮತ್ತಿತರ ಜ್ಞಾನಕ್ಷೇತ್ರಗಳಿರಬಹುದು, ಇದು ಎಲ್ಲದರ ಜೊತೆಗೂ ಬೆಸೆದುಕೊಂಡಿದೆ. ಶೈಕ್ಷಣಿಕ ಕ್ಷೇತ್ರದಲ್ಲಿರುವ ನಾವು ಮಾತ್ರವೇ ಇದನ್ನು ಶ್ರದ್ಧೆಯಿಂದ ಮಾಡಿದರೆ ಸಾಕಾಗುವುದಿಲ್ಲ. ಈ ಸಂಕೀರ್ಣ ಜ್ಞಾನಜಾಲವನ್ನು ಅದರ ಅಭಿವೃದ್ಧಿಯ ಆರಂಭಿಕ ಹಂತಗಳಲ್ಲೇಅರಿತುಕೊಳ್ಳುವುದು ಖಂಡಿತ ಸಣ್ಣ ವಿಷಯವೇನಲ್ಲ. ಈ ಪರಿಸ್ಥಿತಿಗೆ ಪರಿಹಾರವೆಂದರೆ ಜ್ಞಾನ ಮತ್ತು ತಿಳುವಳಿಕೆ ಕ್ಷೇತ್ರದಲ್ಲಿ ಒರೆಗಲ್ಲಿಗೆ ಹಚ್ಚಲ್ಪಟ್ಟಿರುವ'ವಿಸರ್ಜನಾ ಸಿದ್ಧಾಂತ'. ಈ ಸಿದ್ಧಾಂತವು, ಅನಗತ್ಯ ವಿವರಗಳನ್ನು ಬದಿಗೆ ಸರಿಸಿ, ಒಂದೇ ಚೌಕಟ್ಟಿನಲ್ಲಿ ಇಡೀ ಪ್ರಕ್ರಿಯೆಯ ವಿರಾಟರೂಪ ಕಟ್ಟಿಕೊಡುವುದಕ್ಕೆ ಮಹತ್ವ ನೀಡುತ್ತದೆ. ಅದಕ್ಕಿಂತ ಹೆಚ್ಚಾಗಿ, ಸೈಬರ್ ಭದ್ರತೆ ಎಂಬುದು ತಂತ್ರಜ್ಞಾನ ನಿಪುಣರಷ್ಟೇ ಮಾಡಬಲ್ಲ ಕೆಲಸ ಎಂಬ ಪೂರ್ವಾಗ್ರಹವನ್ನು ಈ ವಿಸರ್ಜನಾ ಸಿದ್ಧಾಂತವು ತೊಡೆದುಹಾಕಿ, ಈ ಮಹತ್ವದ ರಾಷ್ಟ್ರನಿರ್ಮಾಣ ಪ್ರಕ್ರಿಯೆಯಲ್ಲಿ ಎಲ್ಲಾ ವಿಭಾಗಗಳ ವಿದ್ಯಾರ್ಥಿಗಳೂ ಭಾಗವಹಿಸಲು ಹುರಿದುಂಬಿಸುತ್ತದೆ.

ನಾವು ಕರ್ತವ್ಯನಿಷ್ಠ ಸೈಬರ್ ಕಮಾಂಡೋಗಳ ಒಂದು ಪಡೆಯನ್ನೇ ಸಜ್ಜುಗೊಳಿಸಿ, ಅವರನ್ನು ಕೈಗಾರಿಕೆ, ಸರ್ಕಾರಿ-ಸಂರಕ್ಷಿತ ವ್ಯವಸ್ಥೆಗಳು, ಭಾರತೀಯ ಸೇನಾಪಡೆಯ ಸೈಬರ್ ಘಟಕ, ಜನರಿಗೆ ಅರಿವು ಮೂಡಿಸುವ ಸರ್ಕಾರೇತರ ಸಂಸ್ಥೆಗಳು, ಮುಂತಾದ ಆಯಕಟ್ಟಿನ ಜಾಗಗಳಲ್ಲಿ ನಿಯೋಜಿಸಬೇಕು. ಅದಕ್ಕಾಗಿ ಸೂಕ್ತ ಮನೋಭಾವ ಹಾಗೂ ಪರಿಸರವನ್ನು ಯುದ್ಧೋಪಾದಿಯಲ್ಲಿ ಅಣಿಗೊಳಿಸಬೇಕು. ಇದಕ್ಕೆಲ್ಲಾ ಸಾಕಷ್ಟು ಸಮಯ ಉಳಿದಿಲ್ಲ. ಹಾಗಾಗಿ, ಈ ಮನೋಭಾವದ ಸೃಷ್ಟಿಗೆ ಯಾರಾದರೂ ಮುಂದಡಿ ಇಡಬೇಕಿದೆ. ಇದೊಂದು ಅಗಾಧ ಸವಾಲು. ಆದರೆ, 'ಅವರು' ಒಟ್ಟುಗೂಡಿ ಎಲ್ಲವನ್ನೂ ಕೆಡವುತ್ತಿರುವಾಗ, ನಾವು ಒಟ್ಟುಗೂಡಿ ಅದನ್ನು ಮತ್ತೆ ಕಟ್ಟುವುದೂ ಸಾಧ್ಯವಿದೆ. ಸೈಸೆಕ್ ಬಳಿ ಅಂತಹದೊಂದು ಸುಪ್ತ ಸಾಮರ್ಥ್ಯ ಇದೆಯೆಂದು ನನಗೆ ನಂಬಿಕೆಯಿದೆ.

ನವೀನಚಂದ್ರ ಕುಮಾರ್
ಸಹಾಯಕ ಪ್ರಾಧ್ಯಾಪಕರು, ಎಲೆಕ್ಟ್ರಾನಿಕ್ಸ್ ವಿಭಾಗ
ಮಂಗಳೂರು ವಿಶ್ವವಿದ್ಯಾಲಯ

Everyone believes we are in an emergency situation in fighting the unseen enemy through cyberattacks. But, however tall we profess about the massive shortage of skilled manpower in the field of cybersecurity, undoubtedly, there is a severe lack of consensus about the academic discipline called cybersecurity. It is a difficult question to answer what should constitute the core of this discipline and the suitable composition, which has connections and ramifications to everything we do in modern life, be it commerce, economy, governance, national security, and whatnot, and interlinked to dozens of fields of knowledge, may it be Computer Science, Electronics, Management, Governance, Ethics, Business, Psychology, Geopolitics, Law enforcement, Quantum computing and many more. We, in academic circles, will only fall short of our duty if we attend to this question earnestly. Deciphering such a complex web of knowledge at its nascent stages of development is by no means a mean task. The solution to this situation is 'abstraction,' a tried and tested philosophy in learning and knowing, which leaves out unnecessary details to later, and gives importance to seeing the complete macro picture in one frame. Above all, this abstraction model must debunk the myth that cybersecurity is all about technology and invite students from all disciplines to participate in this important nation-building process.

We need to create an army of dedicated cyber commandos who can take their positions in industries, government-protected systems, the cyber wing of Indian defense forces, and NGOs who can sensitize the public. We need to prepare the right mindset and ecosystem to do it; in a war footing, time is not in our favor, and someone has to take the initiative to prepare those minds. It is a tall challenge, but, together, we can, when 'they' can. I see a huge potential in CySecK.

Naveenchandra Kumar
Asst. Professor, Dept. of Electronics
Mangalore University

# ಪ್ರಮುಖ ಸೈಬರ್ ಸುದ್ದಿ

## ಕರ್ನಾಟಕದಲ್ಲಿ ತಲೆ ಎತ್ತಲಿವೆ ಎರಡು ಹೊಸ ಸೈಬರ್ ಸೆಕ್ಯೂರಿಟಿ ಪ್ರಯೋಗಾಲಯಗಳು

ಸೈಬರ್ ಅಪರಾಧಗಳ ತನಿಖೆಗೆ ಮೀಸಲಾದ ಎರಡು ಸೈಬರ್ ಭದ್ರತಾ ಪ್ರಯೋಗಾಲಯಗಳನ್ನು ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ಸ್ಥಾಪಿಸಲು ಕರ್ನಾಟಕ ಸರ್ಕಾರ ಸಜ್ಜಾಗಿದೆ.

## ಕ್ರಿಪ್ಟೋ ಮಾನದಂಡಗಳಿಗೆ ಸರ್ಕಾರದ ಮೂಗುದಾರ; ಎಲ್ಲಾ ವಹಿವಾಟುಗಳೂ ಪಿಎಂಎಲ್‌ಎ ವ್ಯಾಪ್ತಿಗೆ

ಮಾರ್ಚ್ ಆರಂಭದಲ್ಲಿ ಹೊರಡಿಸಲಾದ ಗೆಜೆಟ್ ಅಧಿಸೂಚನೆಯ ಪ್ರಕಾರ, ಕ್ರಿಪ್ಟೋ ಮತ್ತು ಫಿಯೆಟ್ ಕರೆನ್ಸಿಗಳ ನಡುವಿನ ವಿನಿಮಯ, ಕ್ರಿಪ್ಟೋಕರೆನ್ಸಿಗಳ ವರ್ಗಾವಣೆ ಮತ್ತು ಸುರಕ್ಷಿತ ಸಂಗ್ರಹಣೆ ಹಾಗೂ ಕ್ರಿಪ್ಟೋಕರೆನ್ಸಿಗಳ ಯಾವುದೇ ಮಾರಾಟ ಅಥವಾ ಕೊಡುಗೆಯಲ್ಲಿ ಪಾಲ್ಗೊಳ್ಳುವುದು ಸೇರಿದಂತೆ ಇಬ್ಬರು ಕಾನೂನಾತ್ಮಕ ವ್ಯಕ್ತಿಗಳ ನಡುವೆ ನಡೆಯುವ ಕ್ರಿಪ್ಟೋಕರೆನ್ಸಿಗಳನ್ನು ಒಳಗೊಂಡ ಎಲ್ಲಾ ವಹಿವಾಟುಗಳೂ ಈಗ ಲೇವಾದೇವಿ ತಡೆ ಕಾಯ್ದೆ (ಪಿಎಂಎಲ್ಎ)ಅಡಿಯಲ್ಲಿ ಬರಲಿವೆ. ಕಾನೂನಾತ್ಮಕ ಹಣಕಾಸು ವ್ಯವಸ್ಥೆಗೆ ಅಕ್ರಮ ಹಣ ಬಂದು ಸೇರುವುದನ್ನು ತಡೆಯುವುದು ಹಾಗೂ ಲೇವಾದೇವಿ ಮಾಡುವವರನ್ನುಶಿಕ್ಷಿಸುವ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ. ಅಪರಾಧ ಕೃತ್ಯಗಳಿಂದ ಬರುವ ಆದಾಯವನ್ನು ವಶಪಡಿಸಿಕೊಳ್ಳಲು ಹಾಗೂ ಕಾನೂನುಬಾಹಿರ ಚಟುವಟಿಕೆಗಳಿಗೆ ಕ್ರಿಪ್ಟೋಕರೆನ್ಸಿಗಳ ಬಳಕೆಯನ್ನು ತಡೆಯಲು ಈ ನಿಬಂಧನೆಯು ಅನುವು ಮಾಡಿಕೊಡುತ್ತದೆ.

## ಸೋರಿಕೆಯಾದವು 16.8 ಕೋಟಿ ಜನರ ವಿವರಗಳು ಬೃಹತ್ ದತ್ತಾಂಶ ದರೋಡೆಯಲ್ಲಿ 7 ಜನರ ಬಂಧನ; 16.8 ಕೋಟಿ ಜನರ ವಿವರಗಳು

ಈ ದತ್ತಾಂಶ ಸೋರಿಕೆಯಲ್ಲಿ ರಕ್ಷಣಾಪಡೆ ಸಿಬ್ಬಂದಿಯ ವಿವರಗಳು, 16.8 ಕೋಟಿ ನಾಗರಿಕರ ವೈಯಕ್ತಿಕ ಮತ್ತು ಗೌಪ್ಯ ಮಾಹಿತಿ, ನಾಗರಿಕರ ಹಾಗೂನೀಟ್ ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಗಳು ಸೇರಿದಂತೆ 140 ಕ್ಕೂ ಹೆಚ್ಚು ಪ್ರಕಾರದ ಮಾಹಿತಿಗಳು ಸೇರಿವೆ. ನೋಯ್ಡಾ ಹಾಗೂ ಇತರ ಸ್ಥಳಗಳಲ್ಲಿ ಮೂರು ಕಾಲ್ ಸೆಂಟರ್‌ಗಳ ಮೂಲಕ ಕಾರ್ಯಾಚರಣೆ ನಡೆಸುತ್ತಿದ್ದ ಆರೋಪಿಗಳು, ಕನಿಷ್ಠ 100 ವಂಚಕರಿಗೆ ಡೇಟಾ ಮಾರಾಟ ಮಾಡಿದ್ದಾರೆ ಎನ್ನಲಾಗಿದೆ.



## ಕಳೆದ ಐದು ವರ್ಷಗಳಲ್ಲಿ 47 ದತ್ತಾಂಶ ಸೋರಿಕೆ ಹಾಗೂ 142 ದತ್ತಾಂಶ ದರೋಡೆ ಪ್ರಕರಣಗಳನ್ನು ವರದಿ ಮಾಡಿದ MeitY

2020 ರಲ್ಲಿ ಹತ್ತು, 2021 ರಲ್ಲಿ ಐದು ಮತ್ತು 2022 ರಲ್ಲಿ ಏಳು ಸರ್ಕಾರಿ ಸಂಸ್ಥೆಗಳಿಗೆ ಸಂಬಂಧಿಸಿದ ಡೇಟಾ ಸೋರಿಕೆಯಾಗಿದೆ ಎಂದು ಕೇಂದ್ರ ಗೃಹ ಸಚಿವಾಲಯ ಹೇಳಿದೆ. ಕಂಪ್ಯೂಟರ್ ಎಮರ್ಜೆನ್ಸಿ ರೆಸ್ಪಾನ್ಸ್ ಟೀಮ್-ಇಂಡಿಯಾ (CERT-In) ಸಂಸ್ಥೆಯು ಸಂತ್ರಸ್ತ ಸರ್ಕಾರಿ ಸಂಸ್ಥೆಗಳಿಗೆ ಅಧಿಸೂಚನೆ ನೀಡುತ್ತದೆ ಹಾಗೂ ಸೇವೆ ಪೂರೈಕೆದಾರರು, ಸಂಬಂಧಪಟ್ಟ ವಲಯದ ನಿಯಂತ್ರಕರು ಮತ್ತು ಕಾನೂನು ಜಾರಿ ಸಂಸ್ಥೆಗಳೊಂದಿಗೆ ಈ ಘಟನೆಗೆ ಸಂಬಂಧಿಸಿದ ಪ್ರತಿಕ್ರಿಯೆ ಕ್ರಮಗಳನ್ನು ಸಂಘಟಿಸುತ್ತದೆ ಎಂದು ಸಚಿವರು ವಿವರಿಸಿದರು. ಡೇಟಾ ಸೋರಿಕೆ ಘಟನೆಗಳಿಗೆ ಪ್ರತಿಕ್ರಿಯೆಯಾಗಿ ಕೈಗೊಳ್ಳಬೇಕಾದ ಪರಿಹಾರ ಕ್ರಮಗಳನ್ನು ಸಹ ಸರ್ಟ್-ಇನ್ ಒದಗಿಸುವುದಾಗಿ ಮಾಹಿತಿ ನೀಡಿದರು.




## ಮಕ್ಕಳ ನಗ್ನಚಿತ್ರ ದಂಧೆ ನಡೆಸುತ್ತಿದ್ದ 12 ಜನರನ್ನು ಬಂಧಿಸಿದ ಕೇರಳ ಪೊಲೀಸರು

ಈ ಪ್ರಕರಣ ಸಂಬಂಧ, ಆರೋಪಿಗಳಿಂದ ಪೊಲೀಸರು 270 ಎಲೆಕ್ಟ್ರಾನಿಕ್ ಸಾಧನಗಳನ್ನು ವಶಪಡಿಸಿಕೊಂಡಿದ್ದು, ಶಂಕಿತರ ವಿರುದ್ಧ 142 ಪ್ರಕರಣ ದಾಖಲಿಸಿದ್ದಾರೆ. ಅವರ ಪೈಕಿ ತಂತ್ರಜ್ಞಾನ ನಿಪುಣರು ಹಾಗೂ ವೃತ್ತಿಪರರು ಕೂಡಾ ಎನ್ನಲಾಗಿದೆ. ಮಕ್ಕಳ ನಗ್ನಚಿತ್ರಗಳಿಗೆ ಸಂಬಂಧಿಸಿದ ಯಾವುದೇ ಅಂಶದ ಸಂಗ್ರಹಣೆ, ವಿತರಣೆ ಅಥವಾ ವೀಕ್ಷಣೆಯು ಶಿಕ್ಷಾರ್ಹ ಅಪರಾಧವಾಗಿದ್ದು, ಇದನ್ನು ಉಲ್ಲಂಘಿಸುವವರಿಗೆ ಐದು ವರ್ಷಗಳ ತನಕ ಜೈಲು ಶಿಕ್ಷೆ ಮತ್ತು 10 ಲಕ್ಷದ ತನಕ ದಂಡ ವಿಧಿಸಬಹುದು.

## ಭಾರತದ 24% ಕಂಪನಿಗಳು ಮಾತ್ರ ಸೈಬರ್ ಭದ್ರತೆ ಅಪಾಯ ಎದುರಿಸಲು ಸಜ್ಜಾಗಿವೆ: ವರದಿ

ಸಿಸ್ಕೋ ಸಂಸ್ಥೆಯು ಎಲ್ಲಾ ಕಂಪನಿಗಳನ್ನೂ ನಾಲ್ಕು ಹಂತಗಳಾಗಿ ವರ್ಗೀಕರಿಸಿದೆ: ಆರಂಭಿಕ, ರಚನಾತ್ಮಕ, ಪ್ರಗತಿಶೀಲ ಮತ್ತು ಪ್ರೌಢ. ಅವುಗಳ ಪೈಕಿ ಪ್ರೌಢ ಕಂಪನಿಗಳು ಮಾತ್ರವೇ ಸುಧಾರಿತ ನಿಯೋಜನೆ ಹಂತಗಳನ್ನು ಸಾಧಿಸಿದ್ದು, ಸೈಬರ್ ಭದ್ರತೆ ಅಪಾಯಗಳನ್ನು ಎದುರಿಸಲು ಬಹುಮಟ್ಟಿಗೆ ಸಿದ್ಧವಾಗಿವೆ.ಸನ್ನದ್ಧತೆಯ ದೃಷ್ಟಿಯಿಂದ ಭಾರತದ 24% ಪ್ರಗತಿಯು ಜಾಗತಿಕ ಸರಾಸರಿ 15% ಗಿಂತ ಹೆಚ್ಚಾಗಿದ್ದರೂ ಸಹ, ಸುಮಾರು 38% ಭಾರತೀಯ ಕಂಪನಿಗಳು ಆರಂಭಿಕ ಅಥವಾ ರಚನಾತ್ಮಕ ಹಂತಗಳಲ್ಲಿ ಬರುತ್ತವೆ. ಅದಲ್ಲದೇ, ಪ್ರತಿಕ್ರಿಯೆ ನೀಡಿರುವ 90% ಜನರು ಮುಂದಿನ 12 ರಿಂದ 24 ತಿಂಗಳುಗಳಲ್ಲಿ ಸೈಬರ್ ಭದ್ರತೆ ಅಪಾಯವೊಂದು ತಮ್ಮ ವ್ಯವಹಾರಕ್ಕೆ ಅಡ್ಡಿಪಡಿಸಲಿದೆ ಎಂಬ ನಿರೀಕ್ಷೆಯಲ್ಲಿದ್ದಾರೆ. ಅಪಾಯ ಎದುರಿಸಲು ಈಗಲೇ ಸಜ್ಜಾಗದಿದ್ದರೆ, ಅದೊಂದು ದುಬಾರಿ ನಿರ್ಲಕ್ಷ್ಯವಾಗಲಿದೆ. 80% ಪ್ರತಿಕ್ರಿಯೆದಾರರು ವರದಿ ಮಾಡಿರುವ ಹಾಗೆ, ಕಳೆದ 12 ತಿಂಗಳಲ್ಲಿ ಒಂದು ಸೈಬರ್ ಭದ್ರತೆ ಪ್ರಕರಣವು ಕಡೇಪಕ್ಷ 500,000 ಡಾಲರ್ (4 ಕೋಟಿ ರೂಪಾಯಿ) ನಷ್ಟಕ್ಕೆ ಕಾರಣವಾಗಿದೆ. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಭರವಸೆಯ ಕೋಲ್ಮಿಂಚಿನ ಹಾಗೆ, 95% ಪ್ರತಿಕ್ರಿಯೆದಾರರು ಮುಂದಿನ ವರ್ಷ ತಮ್ಮ ಸೈಬರ್ ಭದ್ರತೆ ಬಜೆಟ್ಟನ್ನು ಕನಿಷ್ಠ 10% ಹೆಚ್ಚಿಸಲು ತೀರ್ಮಾನಿಸಿದ್ದಾರೆ.

# Top Cyber News

## Karnataka all set to get two new cybersecurity labs

The Karnataka Government is set to establish two cybersecurity forensic labs in Shivamogga and Tumakuru exclusively for investigating cybercrime.

## Govt to regulate crypto norms; Places all transactions under PMLA

According to a gazette notification issued early March, all transactions involving cryptocurrencies between two legal persons, including exchange between crypto and fiat currency, transfer and safekeeping of cryptocurrencies, and participation in any sale or offer of cryptocurrencies, will now come under the Prevention of Money laundering Act (PMLA). The move aims to prevent the integration of illegal money into the legal financial system and punish those responsible for money laundering. The regulation will enable the seizure of proceeds from crimes and deter the use of cryptocurrencies for illegal activities.

## 7 arrested in a massive data breach; Details of 16.8 crore citizens leaked

This includes details of defense personnel, personal and confidential information of 168 million citizens, and more than 140 categories of information, such as the mobile numbers of citizens and NEET students.

The accused were operating through three call centers in Noida and other places, selling data to at least 100 fraudsters.



## MeitY reports 47 data leak and 142 data breach incidents over the last five years

Additionally, the ministry stated that there were ten data leaks related to government organisations in 2020, five in 2021 and seven in 2022. The minister explained that the Computer Emergency Response Team-India (CERT-In) notifies the affected organisations and coordinates incident response measures with service providers, respective sector regulators and law enforcement agencies. CERT-In also provides remedial actions to be taken in response to data leak incidents.




## Kerala Police arrests 12 involved in child pornography

The police seized 270 electronic devices and registered 142 cases against the suspects, including tech experts and professionals. Possessing, distributing, or viewing any content related to child pornography is a punishable criminal offense, and violators can face up to five years imprisonment and a fine of up to Rs 10 lakh.

## A report says only 24% of companies in India are equipped to defend against cybersecurity threats

Cisco has classified companies into four stages: Beginner, Formative, Progressive, and Mature, with only Mature companies achieving advanced deployment stages and being most ready to address security risks. Although India's 24% score in terms of readiness seems higher than the global average of 15%, about 38% of Indian companies fall into Beginner or Formative stages. Furthermore, 90% of respondents expect a cybersecurity incident to disrupt their business in the next 12 to 24 months. The cost of being unprepared can be high, as 80% of respondents reported a cybersecurity incident in the last 12 months, costing at least $500,000. On the positive side, 95% of respondents plan to increase their cybersecurity budget by at least 10% over the next year.

# ಆನ್‌ಲೈನ್ ಮೋಸಗಳು

## ಮುಂಬೈ ಪೊಲೀಸರ ಸೋಗಿನಲ್ಲಿ ಮಹಿಳೆಯಿಂದ 20 ಲಕ್ಷ ರೂಪಾಯಿ ದೋಚಿದ ವಂಚಕರು

ಮೊದಲಿಗೆ ಕೊರಿಯರ್ ಕಂಪನಿಯೊಂದರ ಪ್ರತಿನಿಧಿಗಳಂತೆ ಮಾತಾಡಿದ ವಂಚಕರು, ನಂತರ ಮುಂಬೈ ಡಿ.ಸಿ.ಪಿ.ಯ ಸೋಗಿನಲ್ಲಿ ಮಹಿಳೆಗೆ ವಂಚಿಸಿದರು. ಆಕೆಯ ಆಧಾರ್ ಸಂಖ್ಯೆಯು ಹಲವಾರು "ಅಪರಾಧ ವಹಿವಾಟುಗಳು ಹಾಗೂ ಲೇವಾದೇವಿ ಪ್ರಕರಣಗಳಲ್ಲಿ" ಶಾಮೀಲಾಗಿದೆ ಎಂದು ಹೇಳಿ, ಆಕೆಯ ಖಾತೆಗಳನ್ನು ಸಕ್ರಮಗೊಳಿಸಲು ಹಣ ವರ್ಗಾಯಿಸುವಂತೆ ಕೇಳಿದ್ದಾರೆ. ಹಾಗಾಗಿ, ಇದೊಂದು "ಹಣಕಾಸು ತನಿಖೆ" ಹಾಗೂ "ಭದ್ರತಾ ಠೇವಣಿ" ಎಂದು ನಂಬಿದ ಸಂತ್ರಸ್ತೆಯು, ಆರು ವಹಿವಾಟುಗಳಲ್ಲಿ ಒಟ್ಟು 20,37,194 ರೂಪಾಯಿ ವರ್ಗಾವಣೆ ಮಾಡಿರುವ ಘಟನೆ ವರದಿಯಾಗಿದೆ.

## ಹೋಟೆಲ್ ಬುಕ್ ಮಾಡುತ್ತಿದ್ದ ಮಹಿಳೆಗೆ 96,000 ರೂಪಾಯಿ ವಂಚನೆ

ಆ ಮಹಿಳೆಗೆ ಬುಕಿಂಗ್ ಮುಂಗಡವಾಗಿ ಒಂದು ಯುಪಿಐ ಐಡಿಗೆ 12,000 ರೂಪಾಯಿ ಕಳಿಸುವಂತೆ ಕೇಳಲಾಯಿತು. ಅದರ ಮರುಪಾವತಿಗೆಂದು ಕರೆ ಮಾಡಿದ್ದ ವಂಚಕ, ಆಕೆಯನ್ನು ಒಂದು ವಾಟ್ಸಾಪ್ ಲಿಂಕ್ ಮೇಲೆ ಕ್ಲಿಕ್ಕಿಸುವಂತೆ ಮನವೊಲಿಸಿದ. ಅದನ್ನು ಕ್ಲಿಕ್ಕಿಸಿದ ಕೂಡಲೇ, ಆಕೆಯ ಖಾತೆಯಿಂದ 84,000 ರೂಪಾಯಿ ದೋಚಲಾಯಿತು.

## ಲೈಂಗಿಕ ಸುಲಿಗೆ ಜಾಲಕ್ಕೆ ಸಿಲುಕಿ ಸುಮಾರು 3 ಲಕ್ಷ ರೂಪಾಯಿ ಕಳೆದುಕೊಂಡ ಯುವಕ

ತನ್ನ ವಿಡಿಯೋ ಕರೆಯ ತುಣುಕು ಯೂಟ್ಯೂಬ್‌ನಲ್ಲಿ ಅಪ್ಲೋಡ್ ಆಗುವುದೆಂಬ ಭಯಕ್ಕೆ ಒಳಗಾಗಿ, ಲೈಂಗಿಕ ಸುಲಿಗೆ ಹಗರಣದ ಬಲಿಪಶುವೊಬ್ಬ 3 ಲಕ್ಷ ರೂಪಾಯಿ ಕಳೆದುಕೊಂಡಿದ್ದಾನೆ. ಆತ ಗೂಗಲ್ ಪೇ ಮೂಲಕ ಹಣ ಕಳಿಸಿದ ಮೇಲೂ, ಇನ್ನಷ್ಟು ಹಣ ಕೊಡುವಂತೆ ಬೇಡಿಕೆ ಇಡಲಾಗಿದೆ. ಆತನ ಇಬ್ಬರು ಗೆಳೆಯರು ಸಹ ಹಣ ಕಳಿಸಿದ್ದಾರೆ, ಆದರೆ ಹಣದ ಬೇಡಿಕೆ ನಿಲ್ಲಲೇ ಇಲ್ಲ. ಹಣ ಕಳಿಸುವುದು ಬಿಟ್ಟು ಸಂತ್ರಸ್ತನಿಗೆ ಬೇರೆ ಆಯ್ಕೆ ಇರಲಿಲ್ಲ.



## ಬಿಟ್‌ಕಾಯಿನ್‌ನಲ್ಲಿ 3.5 ಲಕ್ಷ ರೂಪಾಯಿ ಕಳೆದುಕೊಂಡು ಆತ್ಮಹತ್ಯೆಗೆ ಶರಣಾದ ಬಾಲಕ

ಆತನ ಈ ಹೂಡಿಕೆ ವ್ಯವಹಾರ ಮನೆಯವರಿಗೆ ಗೊತ್ತಿರಲಿಲ್ಲ. ಆದರೆ ಪೊಲೀಸರು ಆತನ ಮೊಬೈಲ್ ಜಾಲಾಡಿದಾಗ, ಕ್ರಿಪ್ಟೋಕರೆನ್ಸಿ ಹೂಡಿಕೆಯ ವಿವರಗಳು ಮತ್ತು ಆ ಕುರಿತ ಸುದೀರ್ಘ ಚಾಟ್‌ಗಳು ಬೆಳಕಿಗೆ ಬಂದಿವೆ. ಸೂಕ್ತ ಮಾರ್ಗದರ್ಶನ ಮತ್ತು ಹಣಕಾಸು ಶಿಕ್ಷಣವಿಲ್ಲದೆ ಭಾರೀ ಅಪಾಯದ ಸ್ವತ್ತುಗಳಲ್ಲಿ ಹೂಡಿಕೆ ಮಾಡುವುದು ಎಷ್ಟು ಅಪಾಯಕಾರಿ ಎಂಬುದಕ್ಕೆ ಈ ಘಟನೆ ಸಾಕ್ಷಿಯಾಗಿದೆ.

## ಪಾರ್ಟ್-ಟೈಮ್ ಕೆಲಸದ ಸೋಗಿನಲ್ಲಿ ಮಂಗಳೂರು ಯುವಕನಿಗೆ 15.3 ಲಕ್ಷ ವಂಚನೆ

ಶುರುವಿನಲ್ಲಿ, ಆತನಿಗೆ ಸಣ್ಣ ಪ್ರಮಾಣದ ಹೂಡಿಕೆ ಮಾಡಲು ಕೇಳಲಾಯಿತು. ವಂಚಕರು ಆತನ ನಂಬಿಕೆ ಗಳಿಸಿದ ನಂತರ, ಹೆಚ್ಚಿನ ಹಣ ಹೂಡುವಂತೆಸೂಚಿಸಲಾಯಿತು. ಇದರ ಫಲವಾಗಿ, ಹಲವಾರು ವಹಿವಾಟುಗಳಲ್ಲಿ ಭಾರೀ ಮೊತ್ತದ ನಷ್ಟವಾಗಿದೆ.

## ಆನ್‌ಲೈನ್ ಉದ್ಯೋಗ ವಂಚನೆ: 9 ಲಕ್ಷ ರೂಪಾಯಿ ಪಂಗನಾಮ

ಆನ್‌ಲೈನ್‌ನಲ್ಲಿ ಒಂದು ಮನೆ ಆಧಾರಿತ ಕೆಲಸಕ್ಕೆ (ವರ್ಕ್ ಫ್ರಮ್ ಹೋಮ್) ಅರ್ಜಿ ಹಾಕಿದ್ದ ದೆಹಲಿ ನಿವಾಸಿಯೊಬ್ಬರು ಸೈಬರ್ ಹಗರಣದಲ್ಲಿ 9 ಲಕ್ಷ ರೂ. ಕಳೆದುಕೊಂಡಿದ್ದು ವರದಿಯಾಗಿದೆ. ಸಾಮಾಜಿಕ ಮಾಧ್ಯಮದಲ್ಲಿ ಕಾಣಿಸಿಕೊಂಡ ಈ ಉದ್ಯೋಗಾವಕಾಶದ ಜಾಹೀರಾತನ್ನು ಸಂತ್ರಸ್ತ ಯುವಕ ಕ್ಲಿಕ್ ಮಾಡಿದಾಗ, ಅಲ್ಲಿದ್ದ ಲಿಂಕ್ ಮೂಲಕ ವೆಬ್‌ಸೈಟ್‌ನಲ್ಲಿ ನೋಂದಾಯಿಸಲು ಸೂಚಿಸಲಾಗಿದೆ. ಅಲ್ಲಿ ಕೆಲವು ಹಂತಗಳನ್ನು ಪೂರ್ಣಗೊಳಿಸಿದ ಮೇಲೆ, ಒಂದಷ್ಟು ಮೊತ್ತವನ್ನು ಠೇವಣಿ ಇಟ್ಟು, ಅದನ್ನು ಆಕರ್ಷಕ ಕಮಿಷನ್ ಜೊತೆಗೆ ಹಿಂಪಡೆಯಬಹುದು ಎಂದು ಹೇಳಲಾಗಿದೆ. ಆದರೆ ಇದೆಲ್ಲಾ ಆ ಹಗರಣದ ಎಂಬುದು ಘಟನೆ ಬಳಿಕ ತಿಳಿದುಬಂದಿದೆ.




## ಸೋಷಿಯಲ್ ಮೀಡಿಯಾದಲ್ಲಿ ಐಫೋನ್ ಖರೀದಿಸಲು ಹೋಗಿ 29 ಲಕ್ಷ ಕಳೆದುಕೊಂಡ ಯುವಕ

ಫೋನಿನ ಬೆಲೆಯ 30% ಮೊತ್ತವನ್ನು ಮುಂಗಡ ಪಾವತಿ ಮಾಡುವಂತೆ ಸಂತ್ರಸ್ತನಿಗೆ ಹೇಳಲಾಯಿತು. ಆಮೇಲೆ ಕಸ್ಟಮ್ ಕ್ಲಿಯರೆನ್ಸ್ ಮತ್ತು ತೆರಿಗೆ ಹಣ ನೀಡಬೇಕೆಂದು ವಿನಂತಿಸಿ ಆತನಿಗೆ ಹಲವಾರು ಕರೆಗಳು ಬಂದವು. ಕ್ಲಿಯರೆನ್ಸ್ ನಂತರ ತನ್ನ ಫೋನ್ ಬರಬಹುದೆಂಬ ನಿರೀಕ್ಷೆಯಲ್ಲಿ ಆ ವ್ಯಕ್ತಿ ಹಲವು ಬ್ಯಾಂಕ್ ಖಾತೆಗಳಿಗೆ ಒಟ್ಟು 28,69,50 ರೂಪಾಯಿ ಕಳಿಸಿದ್ದಾನೆ. ಆದರೆ, ಫೋನ್ ಆತನ ಕೈ ಸೇರದೇ ಇರುವ ಘಟನೆ ಬೆಳಕಿಗೆ ಬಂದಿದೆ.

## ಮ್ಯಾಟ್ರಿಮೋನಿ ಆ್ಯಪ್ ವಂಚನೆಯಲ್ಲಿ 19.5 ಲಕ್ಷ ರೂಪಾಯಿ ಕಳೆದುಕೊಂಡ ಮಹಿಳೆ

ಸಂತ್ರಸ್ತೆಯನ್ನು ಭಾರತಕ್ಕೆ ಬಂದು ಭೇಟಿಯಾಗುವುದಾಗಿ ಭರವಸೆ ನೀಡಿದ ವಂಚಕ, ವಿಮಾನದ ಟಿಕೆಟ್ ಸೇರಿದಂತೆ ಹಲವಾರು ವೆಚ್ಚಗಳಿಗಾಗಿ ಹಣ ವರ್ಗಾಯಿಸಲು ಆಕೆಯ ಮನವೊಲಿಸಿದ್ದ. ಆದರೆ, ಹಣ ಸಿಕ್ಕಿದ ಬಳಿಕ, ಆಕೆಗೆ ಜೊತೆ ಮಾತುಕತೆಯನ್ನೇ ನಿಲ್ಲಿಸಿಬಿಟ್ಟ.

# Online Frauds

## Woman loses Rs 20 lakh to fraudsters posing as Mumbai cops

The fraudsters pretended to be representatives from a courier company before impersonating a Mumbai deputy commissioner of police to trick the woman. They claimed her Aadhaar had been involved in multiple "criminal transactions and money laundering cases" and asked her to transfer money to validate her accounts. The victim transferred Rs 20,37,194 in total over six transactions, believing it was for a "financial investigation" and "security deposit".

## Woman defrauded of Rs 96,000 while booking hotel

The woman was asked to make a payment of Rs 12,000 as an advance to a UPI id. When she was contacted by the fraudster for repayment, he convinced her to click on a WhatsApp link, leading to the quick siphoning of Rs 84,000 from her bank account.

## Man falls prey to sextortion scam, loses over Rs 3 lakh

A man lost over Rs 3 lakh in a sextortion scam where he was threatened to pay to prevent his video call recording from being uploaded on YouTube. The victim sent money via GPay, but the caller demanded more. Two of his friends also sent money, but the demands did not stop, and the victim was left with no options.



## Boy commits suicide after losing Rs 3.5 lakh in Bitcoin

The family was unaware of his investment, and the police found the deceased's mobile phone with details of his cryptocurrency investment and long chats regarding the same. The incident highlights the dangers of investing in high-risk assets without proper guidance and financial education.

## Mangaluru man duped of Rs 15.3 lakh on pretext of providing part-time job

Initially, the man was asked to invest small amounts, and once the fraudsters gained his trust, he was directed to send money and lost the huge sum in multiple transactions.

## Man loses Rs. 9 lakh to online job fraud

A Delhi resident lost over Rs 9 lakh in a cyber scam after he applied for a work-from-home job online. The victim clicked on a social media post advertising the opportunity and was directed to register on a website through a given link. He was instructed to complete certain tasks and deposit a certain amount, which he could withdraw with a commission. Unfortunately, it was all part of the scam.



## Man lost Rs 29 lakh for buying iPhone on social media

The victim was asked to make an advance payment of 30% of the phone's price and later got multiple calls requesting money for custom clearance and taxes. The man transferred a total of Rs 28,69,50 to several bank accounts, expecting his phone's delivery after clearance, which never happened.

## Woman loses Rs 19.5 lakh in a matrimonial app fraud

The fraudster convinced her to transfer the money for expenses, including a flight ticket, promising to meet her in India. However, he stopped responding after receiving the money.

- 'ಮಾರ್ಚ್ ಫಾರ್ ಸೈಬರ್‌ಸೆಕ್ಯೂರಿಟಿ' (ಸೈಬರ್ ಭದ್ರತೆಗಾಗಿ ಮಾರ್ಚ್ ತಿಂಗಳು) ಅಭಿಯಾನದ ಭಾಗವಾಗಿ, ಸೈಸೆಕ್ ಸಂಸ್ಥೆಯು ಸೈಬರ್ ಭದ್ರತೆಯ ಮಹತ್ವದ ಬಗ್ಗೆ ಸಕ್ರಿಯವಾಗಿ ಜಾಗೃತಿ ಮೂಡಿಸುತ್ತಿದೆ.
- ನಾಲ್ಕು ರೇಡಿಯೋ ಜಿಂಗಲ್‌ಗಳನ್ನು ನಿರಂತರವಾಗಿ ವಿವಿಧ ಭಾರತಿ (ಧಾರವಾಡ ಮತ್ತು ಕಲಬುರಗಿ) ಹಾಗೂ ಎಫ್‌ಎಂ ರೈನ್‌ಬೋ(ರಾಜ್ಯಾದ್ಯಂತ) ವಾಹಿನಿಗಳ ಮೂಲಕ ಪ್ರಸಾರ ಮಾಡಲಾಯಿತು. ಈ ಜಿಂಗಲ್‌ಗಳು ಜನಸಾಮಾನ್ಯರಿಗೆ ಸೈಬರ್ ಭದ್ರತೆಯ ಮಹತ್ವ ತಿಳಿಸುವ ಜೊತೆಗೆ, ಆನ್‌ಲೈನ್‌ನಲ್ಲಿ ಸುರಕ್ಷಿತವಾಗಿರಲು ಸರಳ ಸಲಹೆಗಳನ್ನು ನೀಡಿತು.
- 'ಮೀಡಿಯಾ ಮಾಸ್ಟರ್ಸ್' ಯೂಟ್ಯೂಬ್ ಚಾನೆಲ್‌ನಲ್ಲಿ ಪ್ರತಿದಿನ ಸೈಬರ್ ಭದ್ರತೆ ಸಲಹೆಗಳನ್ನು ನಿರಂತರವಾಗಿ ಪ್ರಸಾರ ಮಾಡಲಾಯಿತು.

16

- ಮಾರ್ಚ್ 16ರಂದು ಸೈಸೆಕ್ ಸಂಸ್ಥೆಯು ಶಾರ್ಜಾದ ನಾಲ್ಕು ಸದಸ್ಯರ ನಿಯೋಗವನ್ನು ಆಹ್ವಾನಿಸಿತ್ತು. ಅಂತರರಾಷ್ಟ್ರೀಯ ಮಾರುಕಟ್ಟೆಯನ್ನು ಅನ್ವೇಷಿಸುತ್ತಿರುವ ನಮ್ಮ ಮೂರು ಪರಿಸರ ಸ್ಟಾರ್ಟ್‌ಅಪ್‌ಗಳು ಈ ಕಾರ್ಯಕ್ರಮದಲ್ಲಿ ಪಾಲುಗೊಂಡವು.



- As part of the March for Cybersecurity campaign, CySecK has been actively raising awareness about the importance of cybersecurity.
- Four radio jingles were intermittently played on Vividh Bharati (Dharwad & Kalburgi) and FM Rainbow (throughout the state). These jingles aimed to educate people about the importance of cybersecurity and provide them with simple tips to stay safe online.
- Everyday cybersecurity tips played constantly on ‘Media Masters’ YouTube channel.

16

- On 16th of March CySecK hosted a four-member delegation from Sharjah . The event was attended by three of our ecosystem startups who are interested in exploring the international market.



- ಮಾರ್ಚ್ 18ರಂದು, ಭಾರತೀಯ ವಿಜ್ಞಾನ ಸಂಸ್ಥೆ (ಐಐಎಸ್‌ಸಿ) ಆವರಣದಲ್ಲಿ ನಲ್ ಕಮ್ಯೂನಿಟಿ (NULL Community) ಆಯೋಜಿಸಿದ್ದ ಮಾಸಿಕ ಸಭೆಯಲ್ಲಿ ಸೈಸೆಕ್ ಭಾಗವಹಿಸಿತ್ತು. ಸೈಬರ್ ಭದ್ರತೆ ಕುರಿತ ಈ ಸಭೆಯಲ್ಲಿ ವಿವಿಧ ಹಿನ್ನೆಲೆಗಳು ಮತ್ತು ಉದ್ದಿಮೆಗಳ ನಿಪುಣರು, ಆಸಕ್ತರು ಮತ್ತು ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.



- ತನ್ನ ಉದ್ದಿಮೆ ಪಾಲುದಾರರ ಸಹಯೋಗದಲ್ಲಿ ಸೈಸೆಕ್ ಸಂಸ್ಥೆಯು 27 ಮಾರ್ಚ್ 2023ರಿಂದ 1 ಏಪ್ರಿಲ್ 2023ರವರೆಗೆ ಚಳ್ಳಕೆರೆಯ ಐಐಎಸ್‌ಸಿ ಕ್ಯಾಂಪಸ್‌ನಲ್ಲಿ ಇಂಜಿನಿಯರಿಂಗ್ ಕಾಲೇಜು ಉಪನ್ಯಾಸಕರಿಗೆ ಸೈಬರ್ ಭದ್ರತೆ ಕುರಿತು ಯಶಸ್ವಿ ಸಿಬ್ಬಂದಿ ಅಭಿವೃದ್ಧಿಕಾರ್ಯಕ್ರಮ ನಡೆಸಿತು. ತಮ್ಮ ವಿದ್ಯಾರ್ಥಿಗಳಿಗೆ ಸೈಬರ್ ಭದ್ರತೆ ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಕಲಿಸಲು ಅಗತ್ಯವಾದ ಕೌಶಲ್ಯ ಮತ್ತು ಜ್ಞಾನದ ಮೂಲಕ ಅಧ್ಯಾಪಕರನ್ನು ಸಜ್ಜುಗೊಳಿಸುವುದೇ ಈ ಕಾರ್ಯಕ್ರಮದ ಗುರಿಯಾಗಿತ್ತು.





- On March 18th, CySecK hosted the NULL Community's monthly meetup at the Indian Institute of Science (IISc) Campus. The meetup was focused on cyber security and was attended by professionals, enthusiasts, and students from various backgrounds and industries.



- CySecK in association with industry partners conducted a successful Faculty Development Program on Cybersecurity for Engineering College Lecturers from 27th March 2023 to 1st April 2023 at IISc, Challakere campus. The program aimed to equip faculty members with the necessary skills and knowledge to teach cybersecurity concepts effectively to their students.





# ಉಪಯುಕ್ತ ಲಿಂಕ್‌ಗಳು | Useful links

**ಸೈಬರ್ ಜಾಗೃತಿ ಮತ್ತು ಸೈಬರ್ ಸುರಕ್ಷಿತವಾಗಿರಲು ಕೆಲವು ಉಪಯುಕ್ತ ಲಿಂಕ್‌ಗಳು ಇಲ್ಲಿವೆ-**

- ಸೈಬರ್ ವಂಚನೆಗಳ ಬಗ್ಗೆ ದೂರು ದಾಖಲಿಸಲು **cybercrime.gov.in**
- ತಪ್ಪು ಮಾಹಿತಿ ಗುರುತಿಸಲು - **https://factcheck.ksp.gov.in**
- ಆನ್‌ಲೈನ್ ವಂಚನೆಗೆ ಸಂಬಂಧಿಸಿದ ದೂರುಗಳನ್ನು ನೋಂದಾಯಿಸಲು ಬೆಂಗಳೂರು ಜನರು 112ಗೆ ಕರೆ ಮಾಡಬಹುದು

**Some useful links for staying cyber aware and cyber safe -**

- **To lodge complaint against a cyber-crime - cybercrime.gov.in**
- **To identify fake information: https://factcheck.ksp.gov.in**
- **Bangalorians can call 112 for registering complaints related to online frauds.**



# ನಮ್ಮ ಬಗ್ಗೆ | About CySecK

Centre of Excellence for Cyber Security

ಸೈಸೆಕ್ (CySecK) ಎಂಬುದು ಸೈಬರ್ ಸೆಕ್ಯುರಿಟಿಯಲ್ಲಿ ಕರ್ನಾಟಕ ರಾಜ್ಯ ಸರ್ಕಾರದ ಉನ್ನತಜ್ಞಾನ ಕೇಂದ್ರವಾಗಿದೆ (ಸೆಂಟರ್ ಆಫ್ ಎಕ್ಸಲೆನ್ಸ್ ,ಸಿಒಇ). ಇದು ಐಐಎಸ್ಸಿ (ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್) ಸಂಸ್ಥೆಯ ಆವರಣದಲ್ಲಿದೆ. ಐಐಎಸ್ಸಿಯು ಇದರ ಆಂಕರ್ ಸಂಸ್ಥೆಯಾಗಿದ್ದು , ಕೆಎಸ್ಸಿಎಸ್ಟಿ (ಕರ್ನಾಟಕ ಸ್ಟೇಟ್ ಕೌನ್ಸಿಲ್ ಫಾರ್ ಸೈನ್ಸ್ ಅಂಡ್ ಟೆಕ್ನಾಲಜಿ) ಇದರ ಅನುಷ್ಠಾನ ಸಂಸ್ಥೆಯಾಗಿರುತ್ತದೆ. ಸೈಸೆಕ್ ಅನ್ನು ಕರ್ನಾಟಕ ಸರ್ಕಾರದ ಐಟಿ, ಬಿಟಿ ಎಸ್ ಟಿ ವಿಭಾಗದ ಕರ್ನಾಟಕ ಸೃಜನಶೀಲತೆ ಮತ್ತು ತಂತ್ರಜ್ಞಾನ ಸೊಸೈಟಿ (ಕರ್ನಾಟಕ ಇನ್ನೋವೇಶನ್ ಅಂಡ್ ಟೆಕ್ನಾಲಜಿ ಸೊಸೈಟಿ) ಸ್ಥಾಪಿಸಿದೆ.

CySecK is the Karnataka state government's K-tech Centre of Excellence in Cybersecurity, housed in the IISc (Indian Institute of Science) campus, with IISc as the anchor institute and KSCST (Karnataka State Council for Science and Technology) as the implementation agency. CySecK was setup by KITS (Karnataka Innovation and Technology Society) of the Department of IT, BT and S&T.